

# ಕನಸು ಕೈಗೂಡಿದಾಗ ತೃಪ್ತಿ

## ದಿಲೀಪ್ ಶೆಟ್ಟಿ

### ಉದಯದ ಕಸ್ತೂರಿ ನಿವಾಸದ ರಾಘವ

◆ **ಅಭಿನಯದ ಪಯಣ ಆರಂಭ ಆಗಿದ್ದು ಹೇಗೆ?**

ಮಂಗಳೂರು ಮೂಲ. ಮೂಡಬಿದರೆಯಲ್ಲಿ ಎಂಕಾಂ ಓದಿದೆ. ನಂತರ ದುಬೈನ ಎಂಎನ್‌ಸಿ ಕಂಪನಿಯೊಂದರಲ್ಲಿ ಅಕೌಂಟೆಂಟ್ ಆಗಿ ಕೆಲಸ ಆರಂಭಿಸಿದೆ. ಅಲ್ಲಿ 'ಮಿಸ್ಟರ್ ದುಬೈ' ಸ್ಪರ್ಧೆಯಲ್ಲಿ ಭಾರತದ ಪ್ರತಿನಿಧಿಯಾಗಿ ಸ್ಪರ್ಧೆ ನೀಡಿದೆ. ಆಗ ನನಗೆ ಎರಡನೇ ಸ್ಥಾನ ಬಂದಿತು. ಆ ಮೂಲಕ ಮಾಡೆಲಿಂಗ್ ಲೋಕ ಪರಿಚಯವಾಯಿತು. ಅರೇಬಿಕ್‌ನಲ್ಲಿ ಎರಡು ಮೂರು ಜಾಹೀರಾತುಗಳಿಗೆ ಮಾಡೆಲ್ ಆಗಿದ್ದೆ. ಅಷ್ಟರ ಒಳಗಾಗಿ ಹಿಂದಿಯಲ್ಲಿ ಒಂದು ಆಲ್ಬಮ್ ಮಾಡಿದೆ. ಅದಾದ ನಂತರ ಟೀವಿ ಆಸಕ್ತಿ ಮೂಡತೊಡಗಿತು. ಇನ್‌ಸ್ಟಾಗ್ರಾಮ್‌ನಲ್ಲಿ ನನ್ನ ಫೋಟೊ ನೋಡಿ ವಿದ್ಯಾ ಎನ್ನುವವರು 'ವಿದ್ಯಾವಿನಾಯಕ'ದಲ್ಲಿ ನಟಿಸಲು ಅವಕಾಶ ನೀಡಿದರು. ಅದಾದ ಮೇಲೆ ತೆಲುಗು ಧಾರಾವಾಹಿಯಲ್ಲಿ ನಟಿಸಿದೆ. ನಂತರ ಸಿನಿಮಾವೊಂದರಲ್ಲಿ ವಿಲನ್ ಪಾತ್ರ ಮಾಡಿದೆ. ಈಗ ಕಸ್ತೂರಿ ನಿವಾಸ.

ನಟನೆಯನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಲಿಲ್ಲ. ಮೊದಲ ಧಾರಾವಾಹಿಯಲ್ಲಿ ದಿಲೀಪ್‌ರಾಜ್ ಹೇಳಿಕೊಟ್ಟರು. ಸ್ವಯಂ ಆಸಕ್ತಿಯಿಂದ ಅನುಭವಿಗಳು ಮತ್ತು ಹಿರಿಯನಟರಿಂದ ಕಲಿಯುತ್ತಾ ಬಂದಿದ್ದೇನೆ. ಕಸ್ತೂರಿ ನಿವಾಸದ ನಿರ್ದೇಶಕ ಮುಸ್ಸಂಜೆ ಮಹೇಶ ಸ್ವಯಂ ನಟರೂ ಹೌದು. ಅವರು ನಿರ್ದೇಶನವನ್ನು ಅಭಿನಯಿಸಿ ತೋರಿಸಿ ಹೇಳುತ್ತಾರೆ. ಅವರು ನನ್ನ ಅಭಿನಯವನ್ನು ಮತ್ತಷ್ಟು ಶಾರ್ಪ್ ಮಾಡಿದರು. ಈಗ ನನಗೂ ಆತ್ಮ ವಿಶ್ವಾಸ ಮೂಡಿದೆ. ಏನಿದ್ದರೂ ನಟನೆಯೇ ನನ್ನ ಜೀವಾಳ. ಸದ್ಯ ಟೀವಿಯಲ್ಲಿ ಇದ್ದೇನೆ. ಮುಂದಿನ ಗುರಿ ಬೆಳ್ಳಿತೆರೆಯಲ್ಲಿ ಅನಾವರಣ ಆಗಬೇಕು. ನನಗೆ ವೇದಿಕೆ ನೀಡಿದ ಟೀವಿಯನ್ನು ಮರೆಯಲು ಸಾಧ್ಯ ಇಲ್ಲ. ಹಾಗೆಂದು ಅಲ್ಲೇ ಉಳಿಯಲೂ ಆಗುವುದಿಲ್ಲ.

◆ **ಒಳ್ಳೆಯ ಉದ್ಯೋಗ ಬಿಟ್ಟು ಅನಿಶ್ಚಿತ ವೃತ್ತಿಯನ್ನು ಹಿಡಿದಿದ್ದು ಏಕೆ?**

ಎಲ್ಲರಿಗೂ ಎಲ್ಲ ವೃತ್ತಿಯಲ್ಲಿ ಒಂದಲ್ಲ ಒಂದು ರೀತಿಯ ಸವಾಲು ಮತ್ತು ಅನಿಶ್ಚಿತತೆ ಇದ್ದೇ ಇರುತ್ತದೆ. ನಾನು ಹೊರದೇಶದಲ್ಲಿ ಒಳ್ಳೆಯ ಉದ್ಯೋಗದಲ್ಲಿ ಇದ್ದೆ. ಪ್ರತಿತಿಂಗಳೂ ಒಳ್ಳೆಯ ಸಂಪಾದನೆಯನ್ನೂ ಮಾಡ್ತಾ ಇದ್ದೆ. ಆದರೆ ನನಗೆ ಆ ಸಂಪಾದನೆಯಿಂದ ಖುಷಿ ಇರಲಿಲ್ಲ. ನನ್ನ ಆಸೆ ಕನಸುಗಳು ಬೇರೆಯೇ ಇದ್ದವು. ಶಿಕ್ಷಣ ಹಾಗೂ ವೃತ್ತಿ ಅನುಭವ ಇರುವುದರಿಂದ ಅಂತಹ ಉದ್ಯೋಗವನ್ನು ಯಾವತ್ತಾದರೂ ಮತ್ತೆ ಮುಂದುವರಿಸಬಹುದು. ಆದರೆ, ನನ್ನ ಕನಸಿನ ನಟನಾ ವೃತ್ತಿಗೆ ಇದೇ ಸಕಾಲ. ಈಗ ಬಿಟ್ಟರೆ ಮತ್ತೆ ಎಂದೂ ಇದನ್ನು ಮಾಡಲು ಸಾಧ್ಯ ಇಲ್ಲ. ಅವಕಾಶ ಸಿಕ್ಕಾಗ ಉಪಯೋಗಿಸಿಕೊಳ್ಳಬೇಕು ಎನ್ನುವ ನಿಶ್ಚಿತ ನಿರ್ಧಾರದಿಂದ ಅಭಿನಯವನ್ನು ಆರಂಭಿಸಿದೆ. ಈಗ ನನ್ನ ಕನಸಿನಂತೆ ನಟನಾಗಿದ್ದೇನೆ, ಏನೋ ಒಂದು ರೀತಿಯ ತೃಪ್ತಭಾವ ಇಲ್ಲಿ ನನಗೆ ಸಿಕ್ಕಿದೆ. ನನಗೆ ಬೇಕಾಗಿದ್ದೂ ಇದೆ.

◆ **ನಿಮ್ಮ ಸೆಲೆಬ್ರಿಟಿ ಇಮೇಜ್ ಸಾಮಾಜಿಕ ಜೀವನದಲ್ಲಿ ಏನಾದರೂ ಬದಲಾವಣೆ ಉಂಟು ಮಾಡಿದೆಯಾ?**

ಕಾರ್ಪೊರೇಟ್ ನೌಕರನಾಗಿ ಇದ್ದಾಗ ಜೀವನ ಶೈಲಿ ಯಾವ ರೀತಿ ಇತ್ತೋ ಅದೇ ರೀತಿ ಈಗಲೂ ಇದೆ. ಆರಂಭದಲ್ಲಿ ಸಂಬಂಧಿಗಳು ಸ್ನೇಹಿತರ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಜನರ ಪ್ರತಿಸ್ಪಂದನೆ ಸ್ವಲ್ಪ ಮುಜುಗರ ಅನ್ನಿಸಿದ್ದು ಉಂಟು. ಆದರೆ, ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ನಾನು ಮುಕ್ತವಾದೆ. ಈಗ ಅದು ರೂಢಿಯಾಗಿದೆ. ನನ್ನ ಓಡಾಟ ಸುತ್ತಾಟಕ್ಕೆ ಯಾವುದೇ ನಿರ್ಬಂಧವನ್ನು ಹಾಕಿಕೊಂಡಿಲ್ಲ. ಸೆಲೆಬ್ರಿಟಿ ಇಮೇಜ್ ಹಲವರನ್ನು ಹತ್ತಿರಕ್ಕೆ ಬರಮಾಡುತ್ತದೆ. ಅವರು ಬಂದು ಮಾತನಾಡಿಸುತ್ತಾರೆ. ಸಮಯ ಇದ್ದರೆ ಒಂದು ಫೋಟೊ ತೆಗೆದುಕೊಳ್ಳುತ್ತಾರೆ. ಇದು ನನಗೆ ಯಾವ ರೀತಿಯಿಂದಲೂ ಅಡ್ಡಿಯನ್ನು ಉಂಟುಮಾಡಿಲ್ಲ.

◆ **ರಾಘವನ ಬಗ್ಗೆ ಹೇಳುವುದಾದರೆ...**

ಇದು ಒಬ್ಬ ಸಾಮಾನ್ಯ ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ಅನಾವರಣ ಮಾಡುತ್ತದೆ. ರಾಘವ ಒಬ್ಬ ಕನಸುಗಾರ. ಸಾಮಾನ್ಯ ಕುಟುಂಬದ ಮನುಷ್ಯನೊಬ್ಬ ಮದುವೆಯ ನಂತರ ಹೇಗೆ ಬದಲಾಗುತ್ತಾನೆ ಎನ್ನುವುದನ್ನು ಇಲ್ಲಿನ ಕಥೆ ನಿರೂಪಿಸುತ್ತದೆ. ಕುಟುಂಬ ವರ್ಗಕ್ಕೂ ದೂರದವನಂತೆ ಕಾಣುತ್ತೇವೆ. ಜೊತೆಗೆ ಕುಟುಂಬದ ಜೀವನ ತನ್ನ ಎಲ್ಲ ಕನಸುಗಳನ್ನು ಮೂಲೆಗುಂಪು ಮಾಡುತ್ತದೆ ಎನ್ನುವ ವಾಸ್ತವದ ಗುಣವನ್ನು ಈ ಪಾತ್ರ ಹೊಂದಿದೆ. 'ವಿದ್ಯಾವಿನಾಯಕ'ದಲ್ಲಿ ಮಾನಸಿಕ ಸಮಸ್ಯೆ (ಒಸಿಡಿ) ಇರುವವನ ಪಾತ್ರವನ್ನು ಪ್ರತಿನಿಧಿಸಿದ್ದೆ. ಅದು ಅಪರೂಪದ ವ್ಯಕ್ತಿತ್ವಕ್ಕೆ ಜೀವ ತುಂಬಬೇಕಿತ್ತು. ಒಸಿಡಿ ಹೆಚ್ಚೆಂದರೆ ಹತ್ತರಲ್ಲಿ ಒಬ್ಬರಿಗೆ ಇರಬಹುದು. ಹಾಗಿದ್ದರೂ ಒಬ್ಬೊಬ್ಬರದು ಒಂದೊಂದು ರೀತಿಯ ಸಮಸ್ಯೆ ಇರುತ್ತವೆ. ಅಂತಹ ಸಂಕೀರ್ಣ ಪಾತ್ರವನ್ನು ಮಾಡಿದ್ದೇನೆ. ವಿಶೇಷವಾಗಿ ರಾಘವನ ಬಗ್ಗೆ ಹೇಳುವುದಾದರೆ ಆತ ಮದುವೆಯಾದ ನಂತರ ತುಂಬ ಬದಲಾಗುತ್ತಾನೆ. ಅದಕ್ಕೆ ಏನೆಲ್ಲ ಕಾರಣಗಳು ಎದುರಾಗುತ್ತವೆ. ಅದರ ಪರಿಣಾಮ ಏನಾಗುತ್ತದೆ ಎನ್ನುವ ತಾಕಲಾಟಗಳು ಇಲ್ಲಿವೆ.

■ **ರಾಘವೇಂದ್ರ ಕೆ.**